ಯೋಜನೆಯಂತೆ, ಸದರಿ ಯೋಜನೆಗೆ 712.69 ಕೋಟಿ ರೂಪಾಯಿಗಳನ್ನು ಇಟ್ಟಿದ್ದು ಈ ಯೋಜನೆಯನ್ನು ತ್ವರಿತಗತಿಯಲ್ಲಿ ಮಾಡಬೇಕೆಂದು ಸರ್ಕಾರ ಉದ್ದೇಶಿಸಿದ್ದು, ಇದರ ಮೊದಲನೇ ಯೂನಿಟ್ ಅನ್ನು ನವೆಂಬರ್ 2003ಕ್ಕೆ ಆದರೂ ಪ್ರಾರಂಭಗೊಳಿಸಿ ಉಳಿದ ಯೂನಿಟ್‌ಗಳನ್ನು ಅಕ್ಟೋಬರ್-2004ರೊಳಗಾಗಿ ಪೂರ್ಣಗೊಳಿಸಬೇಕೆನ್ನುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಈ ಕಾರ್ಯವನ್ನು ಕಾಲಮಿತಿ ಕಾರ್ಯಕ್ರಮದಲ್ಲಿ ಮುಗಿಸುವುದಕ್ಕಾಗಿ ಈಗಾಗಲೇ ಸೂಚನೆಗಳನ್ನು ನೀಡಲಾಗಿದ್ದು, ಆ ಪವರ್ ಪ್ರಾಜೆಕ್ಟ್‌ನ ಕೆಲಸ ಪ್ರಾರಂಭ ಮಾಡುವ ಸಲುವಾಗಿ ಪ್ರಿಲಿಮಿನರಿ ಸಿದ್ಧತೆಗಳನ್ನು ಏನು ಮಾಡಿಕೊಳ್ಳಬೇಕು ಆ ಕೆಲಸವನ್ನು ಆಲಮಟ್ಟಿ ಯೋಜನೆಯ ಹತ್ತಿರ ಮಾಡುತ್ತಿದ್ದಾರೆ.

ಊ) ತೆಂಗಿನ ಮರದಿಂದ ನೀರಾ ಇಳಿಸುವ ಬಗ್ಗೆ.

ಶ್ರೀ ಸಿ.ಗುರುಸ್ವಾಮಿ(ಚಾಮರಾಜನಗರ): ನಾವು ಹಾಗೂ ಮಾನ್ಯ ಮಹಾದೇವ ಪ್ರಸಾದ್‌ರವರು ಸೇರಿ ರೂಲ್ 69 ಕೆಳಗಡೆ ನೀರಾ ವಿಷಯ ಚರ್ಚಿಸಲು ಮೂವ್ ಮಾಡಿದ್ದೇವೆ, ಇದು ಬಹಳ ಗಂಭೀರವಾದ ವಿಷಯವಾಗಿದ್ದು, ಅದರಲ್ಲೂ 18 ಜಿಲ್ಲೆಗಳಲ್ಲಿ ತೆಂಗು ಬೆಳೆಗಾರರು ಬಹಳ ಕಷ್ಟಪಡುತ್ತಿದ್ದಾರೆ, ಅದರ ಸಾಧಕಬಾಧಕಗಳನ್ನು ಚರ್ಚೆ ಮಾಡೋಣ. ತೊಂದರೆ ಏನಾಗಿದೆ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ನೀಡದೇ ಇದ್ದರೆ ಹೇಗೆ? ಇದರಿಂದಾಗಿ ನಮಗೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು.

ಶ್ರೀ ಜಗದೀಶ ಶೆಟ್ಟರ್: ದಯಮಾಡಿ ಇದರ ಬಗ್ಗೆ ಚರ್ಚಿಸಲು ನಾಳೆಗೆ ಫಿಕ್ಸ್ ಮಾಡಿಬಿಡಿ.

ಅಧ್ಯಕ್ಷರು: ಸರ್ಕಾರದವರು ಒಪ್ಪಿಕೊಂಡರೆ ನನ್ನದೇನೂ ತಕರಾರು ಇಲ್ಲ.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್: ನಿಯಮದ ಪ್ರಕಾರ ಚರ್ಚೆಗೆ ಅವಕಾಶ ಕೊಡಿ. ನಿನ್ನೆ ಚಾಮರಾಜನಗರದಲ್ಲಿ ಹತ್ತು ಸಾವಿರ ಜನ ಸೇರಿ ಚಳುವಳಿ ನಡೆಸಿ ಜಿಲ್ಲಾಧಿಕಾರಿಗಳನ್ನು ಮುತ್ತಿಗೆ ಹಾಕಿದ್ದಾರೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕೃಷಿ ಸಚಿವರನ್ನು ನನ್ನ ಕಛೇರಿಗೆ ಕರೆದು ಇದರ ಬಗ್ಗೆ ಚರ್ಚಿಸಿ

ನಂತರ ಫಿಕ್ಸ್ ಮಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ನೀರಾ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಆ ಭಾಗದಿಂದ ಬಂದಂಥ ಶಾಸಕರು ಇದರ ಬಗ್ಗೆ ಮಾತನಾಡಬೇಕಾಗಿದೆ. ಈಗಾಗಲೇ ಇದರ ಬಗ್ಗೆ ನಾವು ರೂಲ್ 69 ರೂಪದಲ್ಲಿ ಹಾಗೂ ನಿಲುವಳಿ ಸೂಚನೆಯನ್ನು ಕೂಡ ಕಳುಹಿಸಿದ್ದೇವೆ. ಅದಕ್ಕೆ ತಾವು ನಾಳೆಯ ಅಜೆಂಡಾದಲ್ಲಿ ಫಿಕ್ಸ್ ಮಾಡಿದರೆ ಅದರ ಬಗ್ಗೆ ಚರ್ಚೆ ಮಾಡಬಹುದಲ್ಲವೆ? ನಂತರ ಸರ್ಕಾರದ ನಿಲುವು ಏನು ಎಂಬುದು ಗೊತ್ತಾಗುತ್ತದೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೇ, ಸಭೆ ಮುಗಿದಾದ ಮೇಲೆ ದಯಮಾಡಿ ನನ್ನ ಕಛೇರಿಗೆ ಬನ್ನಿ ಇದರ ಬಗ್ಗೆ ಮಾತನಾಡೋಣ.... ಆಯಿತು ಅವರು ಒಪ್ಪಿದ್ದಾರೆ, ಮಾನ್ಯ ಪಾಟೀಲ್‌ರವರೆ, ಆಲಮಟ್ಟಿ ಅಣೆಕಟ್ಟು ಇದರ ಬಗ್ಗೆ ಹೇಳಿಕೆ ಕೊಡಿ.